ಓ.ಎಸ್. ನಂ. 122/2015

ಪಿ.ಡಬ್ಲ್ಯು: 01 (Manjunatha)

ದಿನಾಂಕ: 06.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು: ಪ್ರತಿವಾದಿ ಪರ – ಶ್ರೀ KJG ವಕೀಲರಿಂದ.

ಪ್ರತಿವಾದಿ 1 ರಿಂದ 3 ಸಣ್ಣಬೋರಯ್ಯನಿಗೆ ಸಂಬಂಧಪಟ್ಟಿದ್ದು, ಅವರು ನಮ್ಮ ತಾಯಿ ಇದ್ದಾಗೇ ಅವರ ಹೆಸರಿಗೆ ಪಹಣಿ ಮಾಡಿಕೊಂಡಿದ್ದ ಕಾರಣ ಅವರನ್ನು ಪಕ್ಷಗಾರರನ್ನಾಗಿ ಮಾಡಿರುತ್ತೇನೆ. ನಮ್ಮ ಅಜ್ಜಿಯ ಹೆಸರಿನಲ್ಲಿ ಪ್ರತಿವಾದಿಗಳು ತಮ್ಮ ಅಜ್ಜಿಯ ಹೆಸರಿಗೆ ನಮ್ಮ ಅಜ್ಜಿಯ ಹೆಸರು ಇರುವ ದಾಖಲಾತಿಗಳನ್ನು ಪಹಣಿ ಮಾಡಿಸಿಕೊಂಡ ಕಾರಣ ಪಕ್ಷಗಾರರನ್ನಾಗಿ ಮಾಡಿರುತ್ತೇನೆ. ಸಾಕ್ಷಿ ಮುಂದುವರೆದು ಪ್ರತಿವಾದಿಗಳೆಲ್ಲ ಬೋರಮ್ಮನ ವಾರಸುದಾರರಾಗಿದ್ದು ಬೋರಮ್ಮಳ ಹೆಸರಿಗೆ ಪಹಣಿ ಪತ್ರ ಮಾಡಿಸಿಕೊಂಡಿರುವ ಕಾರಣ ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೇನೆ.

ಈಗ ಪಹಣಿ ಪತ್ರದಲ್ಲಿ ಅವರು ಬೋರಮ್ಮ ಗಂಡ ಬೋರಯ್ಯ ಎಂದು ಸೇರಿಸಿರುತ್ತಾರೆ. ಸದರಿ ಪಹಣಿ ಪತ್ರದಲ್ಲಿ ಆಗಿರುವ ವರ್ಗಾವಣೆಯನ್ನು ನಾನು ಕಂದಾಯ ನ್ಯಾಯಾಲಯದಲ್ಲಿ ಪ್ರಶ್ನಿಸಿರುತ್ತೇನೆಯೇ ಎಂದರೆ ನನ್ನ ತಾಯಿಗೆ ಗೊತ್ತು, ಅವರೇ ಅದನ್ನೆಲ್ಲ ನೋಡಿಕೊಳ್ಳುತ್ತಿದ್ದರು. ವಾದ ಪತ್ರಕ್ಕೆ ಮಾಹಿತಿಯನ್ನು ನನ್ನ ತಾಯಿ ನೀಡಿರುತ್ತಾರೆ. ಆ ಮಾಹಿತಿಯನ್ನು ನಾನು ನಮ್ಮ ವಕೀಲರನ್ನು ಕೇಳಿ ತಿಳಿದುಕೊಂಡಿರುವುದಿಲ್ಲ. ನಾನು ಸಲ್ಲಿಸಿರುವ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿವೆ. ನನ್ನ ಬಳಿ ಮೂಲ ಪಟ್ಟಾ ಇಲ್ಲ ಎಂದರೆ ಸರಿಯಲ್ಲ. ಆದ ಕಾರಣ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಯಾವಾಗಲೂ ಮಾಲೀಕರೇ ಕಂದಾಯ ಕಟ್ಟುತ್ತಾರೆ ಎಂದರೆ ಹೌದು. ಸಾಕ್ಷಿ ಮುಂದುವರೆದು ನನ್ನ ಬಳಿ ಕಂದಾಯ ಕಟ್ಟಿರುವ ಎಲ್ಲ ದಾಖಲಾತಿಗಳು ಇವೆ. ನಾವು ಯಾವುದೇ ಕಂದಾಯ ಕಟ್ಟಿರುವುದಿಲ್ಲ, ಆದ ಕಾರಣ ಕಂದಾಯ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಮಾಲೀಕರಿಗೆ ರಶೀದಿ ಪಟ್ಟಾ ಪುಸ್ತಕ ನೀಡುತ್ತಾರೆ ಎಂದರೆ ಹೌದು. ರಶೀದಿ ಪಟ್ಟಾ ಪುಸ್ತಕ ನನ್ನ ಬಳಿ ಇದೆಯೇ ಎಂದರೆ ಮನೆಯಲ್ಲಿ ಇರಬಹುದು. ಸಾಕ್ಷಿ ಮುಂದುವರೆದು ನನ್ನ ಮನೆಯಲ್ಲಿ ಅವೆಲ್ಲ ಇದ್ದು ಅದನ್ನು ಮುಂದಿನ ವಾಯಿದೆಗೆ ಹಾಜರುಪಡಿಸಬಲ್ಲೆ.

ಈಗ ನಾನು ನೋಡುತ್ತಿರುವುದು ರಶೀದಿ ಪಟ್ಟಾ ಪುಸ್ತಕ ಆಗಿರುತ್ತದೆ. ಅದು ಸರ್ವೆ ನಂಬರ್ 313/2 ಗೆ ಸಂಬಂಧಪಟ್ಟಿದ್ದು, ಅದು ಬೋರಮ್ಮನ ಹೆಸರಿಗೆ ಇದೆ. ಈಗ ನಾನು ನೋಡುತ್ತಿರುವುದು ರಶೀದಿ ಪಟ್ಟಾ ಪುಸ್ತಕ ಪ್ರತಿವಾದಿ ಬೋರಮ್ಮಳ ಹೆಸರಿಗೆ ಇದೆ ಎಂದರೆ ಹೌದು. ಸದರಿ ದಾಖಲಾತಿಯನ್ನು ನಿಡಿ 2 ಎಂದು ಗುರುತಿಸಲಾಯಿತು. ನಾನು ಹಾಜರುಪಡಿಸಿರುವ ಹಕ್ಕು ಬಿಡುಗಡೆ ಪತ್ರವನ್ನು ಗುಡೇಕೋಟೆಯಲ್ಲಿ ಬರೆದಿರುತ್ತಾರೆ.

ಅದನ್ನು ಯಾರು ಬರೆದರು ಎಂದು ನನಗೆ ಗೊತ್ತಿಲ್ಲ. ಅದಕ್ಕೆ ಯಾರು ಸಾಕ್ಷಿ ಹಾಕಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಪತ್ರಕ್ಕೆ ಮತ್ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ತಾಯಿಯ ಹೆಸರಿಗೆ ಪಾಲು ವಿಭಾಗದ ಆಧಾರದ ಮೇರೆಗೆ ದಾವಾ ಸ್ವತ್ತು ಮ್ಯುಟೇಶನ್ ಆಗಿದೆ ಎಂದು ಹೇಳಿದ್ದು, ಪಾಲು ವಿಭಾಗ ಪತ್ರವನ್ನು ಹಾಜರುಪಡಿಸಿದ್ದೇನೆಯೇ ಎಂದರೆ ಹಾಜರುಪಡಿಸಬಲ್ಲೆ. 2006 ರಲ್ಲಿ ನನ್ನ ತಾಯಿಯ ಹೆಸರನ್ನು ತೆಗೆಯಿಸಿ ಪ್ರತಿವಾದಿಗಳು ತಮ್ಮ ಹೆಸರನ್ನು ಸೇರಿಸಲು ಎಸಿ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ಹೌದು. ಸಾಕ್ಷಿ ಮುಂದುವರೆದು ನನ್ನ ತಾಯಿ ದುಡಿಯಲು ಊರು ಬಿಟ್ಟು ಹೋದ ಕಾರಣ ಅದರಲ್ಲಿ ಹಾಜರಾಗಲು ಆಗಿರಲಿಲ್ಲ. ಅದರಲ್ಲಿ ನನ್ನ ತಾಯಿ ವಕೀಲರನ್ನು ನೇಮಕ ಮಾಡಿಕೊಂಡಿದ್ದರು ಎಂದರೆ ಹೌದು. ಆದರೆ ಅನಂತರ ಹೋಗಿರುವುದಿಲ್ಲ. ಅದರಲ್ಲಿ ಎದುರು ಪಾರ್ಟಿ ಬೋರಮ್ಮ ಅವರಿಗೆ ಪಟ್ಟಾ ನೀಡಿರುವುದು ಎಂದು ಆದೇಶ ಆಗಿದೆ ಎಂದರೆ ಹೌದು. ಸಾಕ್ಷಿ ಮುಂದುವರೆದು ನಮಗೆ ಪಟ್ಟಾ ನೀಡಿರುತ್ತಾರೆ. ಸದರಿ ಆದೇಶದಲ್ಲಿ ಬೋರಮ್ಮ ಗಂಡ ಬೋರಯ್ಯ ಅವರಿಗೆ ದರಕಾಸ್ತು ಪತ್ರದ ಪ್ರಕಾರ ಪಟ್ಟಾ ನೀಡಲಾಗಿದೆ ಎಂದು ನಮೂದು ಇದೆ ಎಂದರೆ ಇರಬಹುದು. ಸಾಕ್ಷಿ ಮುಂದುವರೆದು ನಾವು ನ್ಯಾಯಾಲಯಕ್ಕೆ ಸರಿಯಾಗಿ ಹಾಜರಾಗಿಲ್ಲ, ಆದ ಕಾರಣ ಅದರಲ್ಲಿ ಆ ರೀತಿ ಆದೇಶವಾಗಿದೆ. ನಾವು ಸದರಿ ಆದೇಶವನ್ನು ಮೇಲ್ಮನವಿ ಮಾಡಿರುತ್ತೇವೆ. ಮೇಲ್ಮನವಿಯಲ್ಲೂ ಸಹ ನಮ್ಮ ಅರ್ಜಿಯನ್ನು ತಿರಸ್ಕರಿಸಲಾಯಿತು ಎಂದರೆ ಹೌದು. ಸಾಕ್ಷಿ ಮುಂದುವರೆದು ನಮಗೆ ಮೋಸ ಮಾಡಿ ಆ ರೀತಿ ಮಾಡಿಸಿಕೊಂಡಿರುತ್ತಾರೆ. ನಾವು ಮೋಸ ಮಾಡಿಸಿಕೊಂಡು ನಮ್ಮ ಹೆಸರಿಗೆ ಮಾಡಿಸಿಕೊಂಡಿದ್ದ ಮ್ಯುಟೇಶನನ್ನು ನಮಗೆ ಯಾವುದೇ ಹಕ್ಕಿಲ್ಲದ ಕಾರಣ ರದ್ದು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆ ಬಗ್ಗೆ ನಮ್ಮ ಬಳಿ ಎಲ್ಲ ದಾಖಲಾತಿಗಳು ಇವೆ.

ನಾನು ಈಗ ನೋಡುತ್ತಿರುವ ದರಕಾಸ್ತು ರಜಿಸ್ಟರ್ ವಹಿಯಲ್ಲಿ ಬೋರಯ್ಯನ ಹೆಂಡತಿ ಬೋರಮ್ಮ ಎಂದು ಇದೆ ಎಂದರೆ ನನ್ನ ಬಳಿಯೂ ಸಹ ದರಕಾಸ್ತು ರಜಿಸ್ಟರ್ ವಹಿ ನಮ್ಮ ಅಜ್ಜಿಯ ಹೆಸರಿಗೆ ಇದೆ. ದಾವಾ ಆಸ್ತಿಯನ್ನು ಎಂದಿಗೂ ನಾನು ಸರ್ವೇ ಮಾಡಿಸಿರುವುದಿಲ್ಲ. 2015 ಕ್ಕಿಂತ ಮುಂಚಿತವಾಗಿ ಬೋರಯ್ಯನ ಹೆಂಡತಿ ಬೋರಮ್ಮ ಅವರು ದಾವಾ ಸ್ವತ್ತನ್ನು ಅಳತೆ ಮಾಡಿಸಿದ್ದರು ಎಂದರೆ ನಾನು ಸರ್ವೇ ಮಾಡಲು ಬಿಟ್ಟಿರುವುದಿಲ್ಲ. ಸಾಕ್ಷಿ ಮುಂದುವರೆದು ಈ ಬಗ್ಗೆ ನಮ್ಮ ತಾಯಿಯ ಮೇಲೆ ಪೋಲಿಸ್ ಕೇಸ್ ಆಗಿರುತ್ತದೆ. ಸಾಕ್ಷಿ ಮುಂದುವರೆದು ದೌರ್ಜನ್ಯದಿಂದ ಸರ್ವೇ ಮಾಡಿಸಿರುತ್ತಾರೆ. ಸದರಿ ಸರ್ವೇಯಲ್ಲಿ ಪ್ರತಿವಾದಿಯೇ ಸ್ವಾಧೀನದಲ್ಲಿದ್ದಾರೆ ಎಂದು

ಬರೆದಿದ್ದಾರೆ, ಆ ಕಾರಣದಿಂದ ನಮಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ನಾನೇ ವ್ಯವಸಾಯ ಮಾಡುತ್ತಿದ್ದೇನೆ, ನೀವು ಹೇಳುತ್ತಿರುವುದೆಲ್ಲ ಸುಳ್ಳು.

ನನ್ನ ಅಜ್ಜಿಯ ಆಸ್ತಿಯಲ್ಲಿ ನನ್ನ ಅಜ್ಜಿಯ ಎಲ್ಲ ಮಕ್ಕಳಿಗೂ ಹಕ್ಕು ಇದೆ ಎಂದರೆ ನನ್ನ ತಾಯಿಯ ಹೆಸರಿಗೆ ಅವರೆಲ್ಲ ಹಕ್ಕು ಬಿಡುಗಡೆ ಪತ್ರ ಬರೆದುಕೊಟ್ಟಿರುತ್ತಾರೆ. ನನ್ನ ತಾಯಿಯ ಒಡಹುಟ್ಟಿದವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಹೌದು. ದಾವಾ ಆಸ್ತಿಯಲ್ಲಿ ನಾವು ಸ್ವಾಧೀನದಲ್ಲಿಲ್ಲ, ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲು ಮುಕ್ತಾಯ.

ಮರು ವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಕೂಡ್ಲಿಗಿ.